**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ,**

**ಪೀಠಾಸೀನ ಕೊಳ್ಳೇಗಾಲ**

**ಎಸ್.ಸಿ. 5021/2025**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಗುರುಲಿಂಗಶೆಟ್ಟಿ.ಬಿ | **ಪ್ರಮಾಣ ವಚನ ಭೋಧಿಸಿದ ದಿನಾಂಕ** |
| **ತಂದೆ ಹೆಸರು** | : | ಬಸವಶೆಟ್ಟಿ | 04.05.2026 |
| **ವಯಸ್ಸು** | : | 44 ವರ್ಷ | |
| **ವೃತ್ತಿ** | : | ಮುಖ್ಯ ಪೇದೆ, ಕೊಳ್ಳೇಗಾಲ ಪಟ್ಟಣ ಪೊ.ಠಾಣೆ | **ಪ್ರಾ.ಸಾಃ 26** |
| **ವಾಸ ಸ್ಥಳ** | : | ಕೊಳ್ಳೇಗಾಲ | **ಚಾ.ಸಾಃ 47** |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

**ನಾನು 2023 ರಿಂದ ಕೊಳ್ಳೇಗಾಲ ಪಟ್ಟಣ ಪೊ.ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.**

ದಿಃ 02.01.2025 ರಂದು ಈ ಪ್ರಕರಣದಲ್ಲಿ ಮೃತ ಐಮಾನು ಬಾನು ರವರ ಶವ ತನಿಖೆಯನ್ನು ಚಾಸಾ 50 ರವರು ಚಾ.ನಗರ ಜಿಲ್ಲಾ ಆಸ್ಪತ್ರೆಯಲ್ಲಿ ನೆರವೇರಿಸಿದ್ದು, ನಾನು ಶವ ಮಹಜರ್ ನ ವಿಚಾರಗಳನ್ನು ಬೆರಳಚ್ಚು ಮಾಡಿರುತ್ತೇನೆ. ಶವ ಮಹಜರ್ ಅನ್ನು ಈಗಾಗಲೇ ನಿಪಿ 24 ಎಂದು ಈಗಾಗಲೇ ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ 24 (ಬಿ) ಎಂದು ಗುರುತಿಸಲಾಯಿತು. ಅದೇ ದಿನ ಮದ್ಯಾಹ್ನ 1.00 ರಿಂದ 2.00 ಗಂಟೆಯ ಸಮಯದಲ್ಲಿ ಕೃತ್ಯ ನಡೆದ ಸ್ಥಳದಲ್ಲಿ ಚಾಸಾ 50 ರವರು ಮಹಜರ್ ಕ್ರಮವನ್ನು ಜರುಗಿಸಿದ್ದು, ನಾನು ಮಹಜರ್ ವಿಚಾರಗಳನ್ನು ನನ್ನ

ಕೈಬರಹದಲ್ಲಿ ಬರೆದಿರುತ್ತೇನೆ. ಮಹಜರ್ ಸಮಯದಲ್ಲಿ ಚಾಸಾ 50 ರವರು ಒಂದು ಕಬ್ಬಿಣದ ಪೈಪ್, ಒಂದು ಚಾಕುವನ್ನು ಮತ್ತು ಒಂದು ಬ್ಲಾಂಕೇಟ್ ಅನ್ನು ಅಮಾನತ್ತುಪಡಿಸಿಕೊಂಡಿದ್ದು, ಸ್ಥಳದಲ್ಲಿ ಹಾಜರಿದ್ದ ಸೋಕೋ ತಂಡದವರು ಒಂಬತ್ತು ವೈಜ್ಞಾನಿಕ ಸಾಕ್ಷಿಗಳನ್ನು ಸಂಗ್ರಹಿಸಿರುತ್ತಾರೆ. ಮಹಜರ್ ಅನ್ನು ನಿಪಿ 12 ಎಂದು ಈಗಾಗಲೇ ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ 12 (ಬಿ) ಎಂದು ಗುರುತಿಸಲಾಯಿತು. ಭಾವಚಿತ್ರಗಳನ್ನು ಈಗಾಗಲೇ ನಿಪಿ 13 ರಿಂದ 20 ಎಂದು ಗುರುತಿಸಲಾಗಿರುತ್ತದೆ. ಕಬಿಬಣದ ಪೈಪ್ ಅನ್ನು ಮು.ಮಾ 11 ಎಂದು ಮತ್ತು ಚಾಕುವನ್ನು ಮು.ಮಾ 1 ಎಂದು, ಬ್ಲಾಂಕೇಟ್ ಅನ್ನು ಮು.ಮಾ 10 ಎಂದು ಈಗಾಗಲೇ ಗುರುತಿಸಲಾಗಿರುತ್ತದೆ. ಅದೇ ದಿನ ರಾತ್ರಿ 8.45 ರಿಂದ 9.15 ರ ಸಮಯದವರೆಗೆ ವೃತ್ತ ಕಛೇರಿಯಲ್ಲಿ ಆರೋಪಿಯು ಕೃತ್ಯ ಸಮಯದಲ್ಲಿ ಧರಿಸಿದ್ದ ಟೀ ಷರ್ಟ್ ಮತ್ತು ನೀಲಿ ಬಣ್ಣದ ಪ್ಯಾಂಟ್ ಅನ್ನು ಮತ್ತು ರೆಡ್ ಮೀ ಮೊಬೈಲ್ ಅನ್ನು ಹಾಜರುಪಡಿಸಿದ್ದು, ಅವುಗಳನ್ನು ಚಾಸಾ 50 ರವರು ಅಮಾನತ್ತುಪಡಿಸಿಕೊಂಡಾಗ ನಾನು ಮಹಜರ್ ಅನ್ನು ಬೆರಳಚ್ಚು ಮಾಡಿರುತ್ತೇನೆ. ಮಹಜರ್ ಅನ್ನು ನಿಪಿ 26 ಎಂದು ಈಗಾಗಲೇ ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ 26 (ಸಿ) ಎಂದು ಗುರುತಿಸಲಾಯಿತು. ಭಾವಚಿತ್ರಗಳನ್ನು ನಿಪಿ 27 ರಿಂದ 30 ಎಂದು ಈಗಾಗಲೇ ಗುರುತಿಸಲಾಗಿರುತ್ತದೆ. ಟೀ ಷರ್ಟ್ ಅನ್ನು ಮು.ಮಾ 16 ಎಂದು, ನೀಲಿ ಬಣ್ಣದ ಪ್ಯಾಂಟ್ ಅನ್ನು ಮು.ಮಾ 17 ಎಂದು ಈಗಾಗಲೇ ಗುರುತಿಸಲಾಗಿರುತ್ತದೆ.

ಈಗ ನ್ಯಾಯಾಲಯದ ಮುಂದೆ ಇರುವ ಒಂದು ಬಿಳಿ ಬಟ್ಟೆಯಲ್ಲಿ ಹೊಲಿದು ಸೀಲು ಮಾಡಿರುವ ವಸ್ತುಗಳನ್ನು ತೆರೆದು ನೋಡಲು ಅನುಮತಿ ಕೋರಿದ್ದು,ಅನುಮತಿ ನೀಡಲಾಯಿತು. ಸದರಿ ವಸ್ತುಗಳನ್ನು ತೆರೆದು ನೋಡಲಾಗಿ, ಅದರಲ್ಲಿರುವ ಮೊಬೈಲ್ ಅನ್ನು ಮು.ಮಾ 22 ಎಂದು ಗುರುತಿಸಲಾಯಿತು.

ದಿಃ 09.01.2025 ರಂದು ಚಾಸಾ 50 ರವರ ಕಛೇರಿಯಲ್ಲಿ ಚಾಸಾ 3 ರವರು ಕೃತ್ಯ ನಡೆದ ಸಮಯದಲ್ಲಿ ಧರಿಸಿದ್ದ ಹಸಿರು ಬಣ್ಣದ ಚೂಡಿದಾರ್ ಟಾಪ್ ಮತ್ತು ಪ್ಯಾಂಟ್ ಅನ್ನು ಹಾಜರುಪಡಿಸಿದ್ದು, ಮದ್ಯಾಹ್ನ 1.45 ರಿಂದ 2.15 ರವರೆಗೆ ಮಹಜರ್ ಕ್ರಮ ಜರುಗಿಸಿದ್ದು, ನಾನು ಮಹಜರ್ ವಿಚಾರಗಳನ್ನು ಬೆರಳಚ್ಚು ಮಾಡಿರುತ್ತೇನೆ.

ಮಹಜರ್ ಅನ್ನು  ನಿಪಿ 69 ಎಂದು ಈಗಾಗಲೇ ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ 69 (ಸಿ) ಎಂದು ಗುರುತಿಸಲಾಯಿತು. ಭಾವಚಿತ್ರಗಳನ್ನು ನಿಪಿ 65 ರಿಂದ 68 ಎಂದು ಈಗಾಗಲೇ ಗುರುತಿಸಲಾಗಿರುತ್ತದೆ. ಹಸಿರು ಬಣ್ಣದ ಚೂಡಿದಾರ್ ಟಾಪ್ ಅನ್ನು ಮು.ಮಾ 14 ಎಂದು  ಮತ್ತು ಪ್ಯಾಂಟ್ ಅನ್ನು ಮು.ಮಾ 15  ಎಂದು ಈಗಾಗಲೇ ಗುರುತಿಸಲಾಗಿರುತ್ತದೆ.

ದಿಃ 19.01.2025 ರಂದು ಮೈಸೂರಿನ ಸೆನ್ ಪೊ.ಠಾಣೆಯಲ್ಲಿ ಮೊಬೈಲ್ ದತ್ತಾಂಶಗಳನ್ನು ಹೊರತೆಗೆಯುವ ಸಮಯದಲ್ಲಿ ಮಹಜರ್ ಅನ್ನು ಬೆರಳಚ್ಚು ಮಾಡಿರುತ್ತೇನೆ. ಮಹಜರ್ ಅನ್ನು  ನಿಪಿ 60 ಎಂದು ಈಗಾಗಲೇ ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ 60(ಬಿ) ಎಂದು ಗುರುತಿಸಲಾಯಿತು. ಭಾವಚಿತ್ರಗಳನ್ನು ನಿಪಿ 61 ಮತ್ತು 62 ಎಂದು ಈಗಾಗಲೇ ಗುರುತಿಸಲಾಗಿರುತ್ತದೆ.

ತನಿಖಾಧಿಕಾರಿಗಳು ಸಾಕ್ಷಿದಾರರುಗಳ ಹೇಳಿಕೆ ಮಾಡಿಕೊಳ್ಳುವಾಗ ವಿಡೀಯೋ ಚಿತ್ರೀಕರಣ ಮಾಡಿರುತ್ತೇನೆ. ಈ ಬಗ್ಗೆ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 63(4) (ಸಿ) ರಂತೆ ದೃಡೀಕರಣವನ್ನು ನೀಡಿರುತ್ತೇನೆ. ದೃಡೀಕರಣವನ್ನು ನಿಪಿ 70 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ 70(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದೆ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ- ಶ್ರೀ  ಸಿ.ಆರ್ ವಕೀಲರಿಂದ**

ತನಿಖಾಧಿಕಾರಿಗಳು ನನ್ನ ಹೇಳಿಕೆ ಮಾಡಿಕೊಂಡಿರುವುದಿಲ್ಲ. ತನಿಖಾಧಿಕಾರಿಗಳು ಶವ ತನಿಖಾ ಸಮಯದಲ್ಲಿ ಸಾಕ್ಷಿದಾರರಿಗೆ ನೋಟಿಸ್ ಕೊಟ್ಟಿದ್ದರು. ಸ್ಥಳ ಮಹಜರ್ ಸಮಯದಲ್ಲಿ ಮತ್ತು ಅಮಾನತ್ತು ಮಹಜರ್ ಗಳ ಸಮಯದಲ್ಲಿ ಸಾಕ್ಷಿದಾರಿಗೆ ನೋಟಿಸ್ ನೀಡಿದ್ದರು.  ನಾನು ಬೆರಳಚ್ಚು ಮಾಡಿದ ಕಂಪ್ಯೂಟರ್ ಮಾಡೆಲ್ ಬಗ್ಗೆ ತನಿಖಾಧಿಕಾರಿಗಳು ನನಗೆ ವಿವರ ನೀಡಿರುವುದಿಲ್ಲ.  ಸಾಕ್ಷಿದಾರರ ಹೇಳಿಕೆಗಳನ್ನು ಮಾಡಿಕೊಳ್ಳುವಾಗ ವೀಡೀಯೋ ಚಿತ್ರೀಕರಣ ಮಾಡಿದ ಕ್ಯಾಮೇರಾದ ಬಗ್ಗೆ ವಿವರಗಳನ್ನು ಸಾಕ್ಷಿದಾರರ ಹೇಳಿಕೆಗಳಲ್ಲಿ ನಮೂದು ಮಾಡಿರುವುದಿಲ್ಲ. ದಿಃ **15.03.2025** ರಂದು ನಾನು ದೃಡೀಕರಣವನ್ನು ನೀಡಿರುತ್ತೇನೆ. ನಿಪಿ **70** ಅನ್ನು

ಪಡೆಯುವ ಸಮಯದಲ್ಲಿ ತನಿಖಾಧಿಕಾರಿಗಳು ಸಾಕ್ಷಿದಾರರ ಹೇಳಿಕೆಗಳನ್ನು ಡಿವಿಡಿಯಲ್ಲಿ ಪರಿಶೀಲಿಸಿರುತ್ತಾರೆ. ನಾನು ಆಸ್ಪತ್ರೆಗೆ ಹೋಗಿರಿಲ್ಲ, ಅಲ್ಲಿ ಯಾವುದೇ ಮಹಜರ್ ಅನ್ನು ಬೆರಳಚ್ಚು ಮಾಡಿಲ್ಲ, ಕೃತ್ಯ ಸ್ಥಳಕ್ಕೆ ಹೋಗಿಲ್ಲ, ಅಲ್ಲಿ ಯಾವುದೇ ಮಹಜರ್ ಅನ್ನು ಬರೆದಿಲ್ಲ, ಎರಡು ಮಹಜರ್ ಗಳನ್ನು ಠಾಣೆಯಲ್ಲಿಯೇ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಸೆನ್ ಪೊ.ಠಾಣೆಗೆ ಹೋಗಿಲ್ಲ, ಅಲ್ಲಿ ಯಾವುದೇ ಮಹಜರ್ ಅನ್ನು ಬೆರಳಚ್ಚು ಮಾಡಿಲ್ಲ ಎಂದರೆ ಸರಿಯಲ್ಲ. ಮೊಬೈಲ್ ಫೋನ್ ದತ್ತಾಂಶಗಳನ್ನು ಅಭಿಲಾಷ್ ಎಂಬ ಸಿಬ್ಬಂದಿ ಹೊರ ತೆಗೆದಿರುತ್ತಾರೆ. ಆರೋಪಿ ಯಾವುದೇ ಮೊಬೈಲ್ ಫೋನನ್ನು ಮತ್ತು ಬಟ್ಟೆಗಳನ್ನು ಹಾಜರುಪಡಿಸಿಲ್ಲ, ಚಾಸಾ 3 ರವರು ನನ್ನ ಸಮಕ್ಷಮ ಯಾವುದೇ ಬಟ್ಟೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಭಾವಚಿತ್ರಗಳನ್ನು ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ತನಿಖಾಧಿಕಾರಿಗಳಿಗೆ ಸಹಾಯವಾಗಲೀ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಾಮರಾಜನಗರ, ಪೀಠಾಸೀನ ಕೊಳ್ಳೇಗಾಲ